ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 78 ಹೈಕರ್ಕೋ 2014

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 22.05.2015

<u>ಸುತ್ತೋಲೆ</u>

ವಿಷಯ: ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013 ಹಾಗೂ ಅದರಡಿಯಲ್ಲಿ ಹೊರಡಿಸಲಾದ ನಿಯಮಗಳಲ್ಲಿನ ವಿವಿಧ ಕಂಡಿಕೆ/ಉಪಬಂಧಗಳ ಸ್ಪಷ್ಟೀಕರಣದ ಬಗ್ಗೆ.

******

ದಿನಾಂಕ 15.04.2015ರಂದು ಬೀದರ್‌ನಲ್ಲಿ ಏರ್ಪಡಿಸಲಾಗಿದ್ದ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಜಿಲ್ಲಾಧಿಕಾರಿಗಳ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ, ಸಹಾಯಕ ಆಯುಕ್ತರ ಹಾಗೂ ಡಿಡಿಪಿಐ ಗಳ ಒಂದು ದಿನದ ಕಾರ್ಯಾಗಾರದಲ್ಲಿ ಸಾರ್ವಜನಿಕ ಉದ್ಯೋಗ ಆದೇಶದಡಿಯಲ್ಲಿ ಹಾಗೂ ಶಿಕ್ಷಣ ಕ್ಷೇತ್ರದಲ್ಲಿನ ಪ್ರವೇಶಾತಿಯಲ್ಲಿ ನೀಡಲಾದ ಮೀಸಲಾತಿಗೆ ಸಂಬಂಧಿಸಿದ ಆದೇಶಗಳಲ್ಲಿನ ವಿವಿಧ ಕಂಡಿಕೆ/ಉಪಬಂಧಗಳಿಗೆ ಸ್ಪಷ್ಟೀಕರಣ ನೀಡಬೇಕೆಂದು ಕೋರಿದ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿರುತ್ತದೆ:

**ಸ್ಪಷ್ಟೀಕರಣ 1: ರಾಜ್ಯ ಮಟ್ಟದ ಕಛೇರಿ ಅಥವಾ ಸಂಸ್ಥೆಗಳಲ್ಲಿ ಶೇಕಡ 8ರಂತೆ ರಾಜ್ಯ ಮಟ್ಟದ ಮೀಸಲಾತಿ ನಿಗದಿಪಡಿಸುವ ಬಗ್ಗೆ:**

**ಸಾರ್ವಜನಿಕ ಉದ್ಯೋಗ ಆದೇಶದ ಕಂಡಿಕೆ 2(1)(ಐ) ಅರ್ಥ ವಿವರಣೆಯಂತೆ ರಾಜ್ಯಕ್ಕೆ ಸಮಗ್ರವಾಗಿ ಸೇವೆ ಸಲ್ಲಿಸುತ್ತಿರುವ ಅಥವಾ ರಾಜ್ಯದ ಸಮಗ್ರ ವಿಸ್ತಾರದ ಅಧಿಕಾರ ವ್ಯಾಪ್ತಿಯು ಅಥವಾ ರಾಜ್ಯ ರಾಜಧಾನಿ ಪ್ರದೇಶಕ್ಕೆ ಸೇವೆ ಸಲ್ಲಿಸುತ್ತಿರುವ ಕಛೇರಿಗಳನ್ನು ರಾಜ್ಯ ಮಟ್ಟದ ಕಛೇರಿ/ಸಂಸ್ಥೆಯೆಂದು ವರ್ಗೀಕರಿಸಬೇಕಾಗಿರುವ ಹಿನ್ನೆಲೆಯಲ್ಲಿ, ರಾಜ್ಯದ ರಾಜಧಾನಿ ಪ್ರದೇಶದ ವಿಸ್ತಾರಕ್ಕೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವಂತಹ ಕಛೇರಿಗಳಲ್ಲಿ ಶೇಕಡ 8ರಂತೆ ರಾಜ್ಯ ಮಟ್ಟದ ಮೀಸಲಾತಿ ನೀಡುವಂತೆ ಸ್ಪಷ್ಟೀಕರಿಸಲಾಗಿದೆ.**

ಸ್ಪಷ್ಟೀಕರಣ 2: ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಸಂಬಂಧಿಸಿದಂತೆ ಸ್ಥಳೀಯ ವ್ಯಕ್ತಿಯೆಂದು ಪರಿಗಣಿಸುವಲ್ಲಿ ಪಡೆಯಬಹುದಾದ ಪ್ರಮಾಣ ಪತ್ರದ ಬಗ್ಗೆ

ಸಾರ್ವಜನಿಕ ಉದ್ಯೋಗ ಆದೇಶದ ಕಂಡಿಕೆ 6(1)(ಐ)ನಂತೆ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಸಂಬಂಧಿಸಿದಂತೆ ಸ್ಥಳೀಯ ಪ್ರದೇಶದೊಳಗೆ ಬರುವ ಅವರ ಸ್ವಂತ ಊರು ಅಥವಾ ಅವರ ಸ್ಥಳಕ್ಕೆ ಸಂಬಂಧಿಸಿದಂತೆ ಅವರ ಸೇವಾ ಪುಸ್ತಕದಲ್ಲಿ ದಿನಾಂಕ 01.01.2013ಕ್ಕೆ ಮುಂಚಿನ ನಮೂದು ಅವರ ಅಧಿವಾಸದ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದೆಂದು ನಮೂದಿಸಲಾಗಿರುತ್ತದೆ. ಸದರಿ ಆದೇಶದ ಅಡಿಯಲ್ಲಿ ದಿನಾಂಕ 29.01.2014ರಂದು ಹೊರಡಿಸಲಾದ ನಿಯಮಗಳಂತೆ ಅಧಿಸೂಚನೆ-IIರಲ್ಲಿನ ನಿಯಮ 3(3)ರಲ್ಲಿನ proviso ನಂತೆ ಸೇವಾ ಪುಸ್ತಕದಲ್ಲಿ ನಮೂದಿಸಲಾಗಿರುವ ಸ್ವಗ್ರಾಮ ಅಥವಾ ಸ್ಥಳದ ಆಧಾರದ ಮೇಲೆ ಅವನು ಸ್ಥಳೀಯ ವ್ಯಕ್ತಿಯ ಸ್ಥಾನವನ್ನು ಕ್ಲೇಮ್ ಮಾಡದಿರುವ ಸಂದರ್ಭದಲ್ಲಿ, ಸದರಿ ನಿಯಮದಡಿಯಲ್ಲಿ ನಿರ್ದಿಷ್ಟ ಪಡಿಸಿರುವ ರೀತಿಯಲ್ಲಿ ಅರ್ಹತಾ ಪ್ರಮಾಣ ಪತ್ರವನ್ನು ಪಡೆದುಕೊಳ್ಳತಕ್ಕದ್ದೆಂದು ಹಾಗೂ ಅಧಿಸೂಚನೆ-Iರಲ್ಲಿನ ನಿಯಮ 5(3)ರಂತೆ ಸೇವಾ ಪುಸ್ತಕದಲ್ಲಿ ನಮೂದಿಸಿರುವುದನ್ನು ಹೊರತುಪಡಿಸಿ, ಬೇರೆ ಸ್ಥಳಕ್ಕಾಗಿ ನೌಕರನು ಕ್ಲೇಮ್ ಮಾಡಿದ್ದಲ್ಲಿ, ಅವನು ಸ್ಥಳೀಯ ವ್ಯಕ್ತಿಯ ಪ್ರವರ್ಗಕ್ಕೆ ಸೇರುತ್ತಾನೆಂದು ಸಕ್ಷಮ ಪ್ರಾಧಿಕಾರದಿಂದ ಅನುಬಂಧ-ಬಿ ನಲ್ಲಿ ನಿರ್ದಿಷ್ಟಪಡಿಸಲಾದ ನಮೂನೆಯಲ್ಲಿ ಅರ್ಹತಾ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು ಎಂದು ಸಹ ನಮೂದಿಸಲಾಗಿರುತ್ತದೆ. ಸಾರ್ವಜನಿಕ ಉದ್ಯೋಗ ಆದೇಶದ ಕಂಡಿಕೆ 6(1)(ಐ) ಹಾಗೂ ಸದರಿ ಆದೇಶದ ಅಡಿಯಲ್ಲಿ ದಿನಾಂಕ 29.01.2014ರಂದು ಹೊರಡಿಸಲಾದ ಅಧಿಸೂಚನೆ-Iರ ನಿಯಮ 5(3) ಹಾಗೂ ಅಧಿಸೂಚನೆ-IIರ ನಿಯಮ 3(3)ರಲ್ಲಿನ ನಮೂದುಗಳ ಹಿನ್ನೆಲೆಯಲ್ಲಿ, ಸೇವಾ ಪುಸ್ತಕದಲ್ಲಿ ನಮೂದಿಸಲಾಗಿರುವ ಸ್ವಗ್ರಾಮ ಅಥವಾ ಸ್ಥಳದ ಆಧಾರದ ಮೇಲೆ ಅವನು ಸ್ಥಳೀಯ ವ್ಯಕ್ತಿಯ ಸ್ಥಾನಮಾನ ಕ್ಲೇಮ್ ಮಾಡದಿರುವ ಸಂದರ್ಭದಲ್ಲಿ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಅರ್ಹತಾ ಪ್ರಮಾಣ ಪತ್ರವನ್ನು ಪಡೆದು

.......2

ಸ್ಥಳೀಯ ವ್ಯಕ್ತಿಯೆಂಬ ಹಕ್ಕನ್ನು ಸ್ಥಾಪಿಸಬಹುದೆಂದು ಸ್ಪಷ್ಟೀಕರಣ ನೀಡಲಾಗಿದೆ. ಮುಂದುವರೆದು, ಈ ನಿಟ್ಟಿನಲ್ಲಿ ಈ ಹಿಂದೆ ಪತ್ರ-ಸಂಖ್ಯೆ:-ಸಿಆಸುಇ-78-ಹೈಕಕೋ-2014, ದಿನಾಂಕ 16.09.2014 ಹಾಗೂ ಪತ್ರ ಸಂಖ್ಯೆ: ಸಿಆಸುಇ 78 ಹೈಕಕೋ 2014, ದಿನಾಂಕ 14.01.2015ರಲ್ಲಿ ನೀಡಲಾಗಿದ್ದ ಸ್ಪಷ್ಟೀಕರಣ/ನಿರ್ದೇಶನಗಳನ್ನು ರದ್ದುಗೊಳಿಸಿ (supersede) ಮೇಲಿನಂತೆ ಸಂಬಂಧಿಸಿದ ಸಕ್ಷಮ ಪ್ರಾಧಿಕಾರಿಗಳು ಕ್ರಮ ವಹಿಸುವಂತೆ ನಿದೇಶಿಸಲಾಗಿದೆ.

ಸ್ಪಷ್ಟೀಕರಣ 3: ಸ್ಥಳೀಯ ಹಾಗೂ ಮಿಕ್ಕುಳಿದ ವೃಂದಗಳಲ್ಲಿ ಲಭ್ಯವಿರುವ ಹುದ್ದೆಗಳನ್ನು ತುಂಬುವ ಬಗ್ಗೆ ಅನುಸರಿಸಬೇಕಾದ ವಿಧಾನಗಳ ಬಗ್ಗೆ.

ಮಾತೃ ವೃಂದದಿಂದ ಸ್ಥಳೀಯ ವೃಂದ ಹಾಗೂ ಮಿಕ್ಕುಳಿದ ವೃಂದಗಳನ್ನು ಬೇರ್ಪಡಿಸಿ, ಕಾರ್ಯನಿರ್ವಹಿಸುತ್ತಿರುವ ಸ್ಥಳೀಯ ವ್ಯಕ್ತಿಗಳಿಂದ ಆಯ್ಕೆ ಪಡೆದು, ಅವರವರ ಆಯ್ಕೆಗನುಸಾರವಾಗಿ ಹಂಚಿಕೆ ಮಾಡಿದ ನಂತರದಲ್ಲಿ ಎರಡೂ ವೃಂದಗಳಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮುಖೇನ ತುಂಬುವಲ್ಲಿ ನೇಮಕಾತಿ ಪ್ರಾಧಿಕಾರಿಗಳು ಸ್ಥಳೀಯ ಹಾಗೂ ಮಿಕ್ಕುಳಿದ ವೃಂದಗಳಲ್ಲಿ ಲಭ್ಯವಿರುವ ಹುದ್ದೆಗಳಿಗೆ ಏಕ ಕಾಲಕ್ಕೆ (ಎರಡೂ ವೃಂದಗಳಿಗೆ ಒಂದೇ ಅರ್ಜಿ) ಅರ್ಜಿಯನ್ನು ಆಹ್ವಾನಿಸಿ, ನೇಮಕಾತಿ ಪ್ರಕ್ರಿಯೆ ಮುಂದುವರೆಸಿಕೊಂಡು ಹೋಗುವ ಬಗ್ಗೆ ನೇಮಕಾತಿ ಅರ್ಜಿಯಲ್ಲಿಯೇ ಈ ಕೆಳಕಂಡಂತೆ ಆಯ್ಕೆ ಪಡೆಯುವಂತೆ ಆಯ್ಕೆ ಪ್ರಾಧಿಕಾರಿಗಳಿಗೆ ನಿರ್ದೇಶಿಸಲಾಗಿದೆ:

1. ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಮೀಸಲಾತಿ ಹುದ್ದೆಗಳಿಗೆ ಆಯ್ಕೆ ಕೋರುವಿರಾ?: ಹೌದು / ಇಲ್ಲ.
2. ಸ್ಥಳೀಯ ವೃಂದ ಆಯ್ಕೆ ಮಾಡಿದ್ದಲ್ಲಿ, ಸ್ಥಳೀಯ ವೃಂದದಲ್ಲಿನ ಆದ್ಯತೆ:
   (ಅ) ಮೊದಲನೆ ಆದ್ಯತೆ: ರಾಜ್ಯ ಮಟ್ಟದ ಸ್ಥಳೀಯ ವೃಂದ (ಶೇಕಡ 8ರಂತಿರುವ) / ಪ್ರಾದೇಶಿಕ (ಜಿಲ್ಲಾ/ತಾಲ್ಲೂಕು) ಮಟ್ಟದ ಸ್ಥಳೀಯ ವೃಂದ (ಶೇಕಡ 75/80/85ರಂತಿರುವ).
   (ಆ) ಎರಡನೇ ಆದ್ಯತೆ: ರಾಜ್ಯ ಮಟ್ಟದ ಸ್ಥಳೀಯ ವೃಂದ (ಶೇಕಡ 8ರಂತಿರುವ) / ಪ್ರಾದೇಶಿಕ (ಜಿಲ್ಲಾ/ತಾಲ್ಲೂಕು) ಮಟ್ಟದ ಸ್ಥಳೀಯ ವೃಂದ (ಶೇಕಡ 75/80/85ರಂತಿರುವ).
3. ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೂ ಅರ್ಜಿ ಸಲ್ಲಿಸಲು ಬಯಸುವಿರಾ? : ಹೌದು / ಇಲ್ಲ.
   Note: ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಹುದ್ದೆಗೆ ಆಯ್ಕೆ ಕೋರಿ, ಅರ್ಜಿ ಸಲ್ಲಿಸುವ ಸ್ಥಳೀಯ ಅಭ್ಯರ್ಥಿಗಳು ಮಿಕ್ಕುಳಿದ ವೃಂದದಲ್ಲಿನ ಹುದ್ದೆಗಳಿಗೂ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.
4. ಸ್ಥಳೀಯ ವೃಂದ ಹಾಗೂ ಮಿಕ್ಕುಳಿದ ವೃಂದಗಳಲ್ಲಿ ಒಂದೇ ಹುದ್ದೆಯ ಆಯ್ಕೆಗೆ ಅರ್ಹತೆ ಹೊಂದಿದ್ದಲ್ಲಿ, ಯಾವ ವೃಂದದ ಹುದ್ದೆಗೆ ಆಯ್ಕೆ ಬಯಸುತ್ತೀರಾ?: ಸ್ಥಳೀಯ ವೃಂದ / ಮಿಕ್ಕುಳಿದ ವೃಂದ.
5. ಮಿಕ್ಕುಳಿದ ವೃಂದದಲ್ಲಿ ಸ್ಥಳೀಯ ವೃಂದಕ್ಕಿಂತ ಉತ್ತಮ ಆದ್ಯತೆ (better preference) ದೊರೆಯುವುದಾದಲ್ಲಿ ಮಿಕ್ಕುಳಿದ ವೃಂದ ಆಯ್ಕೆ ಮಾಡುವಿರಾ?: ಹೌದು / ಇಲ್ಲ.
   Note: ಮಿಕ್ಕುಳಿದ ವೃಂದದಲ್ಲಿ ಆಯ್ಕೆ ಬಯಸಿ ನೇಮಕಾತಿ ಹೊಂದಿದ್ದಲ್ಲಿ, ಸೇವಾ ಅವಧಿಯಲ್ಲಿ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಯಾವುದೇ ಸವಲತ್ತು ನೀಡಲಾಗುವುದಿಲ್ಲ ಎಂಬುದನ್ನು ಸ್ಪಷ್ಟೀಕರಿಸಲಾಗಿದೆ.

ಸ್ಪಷ್ಟೀಕರಣ 4: ಸಾರ್ವಜನಿಕ ಉದ್ಯೋಗ ಆದೇಶದಲ್ಲಿ ಸ್ಥಳೀಯ ವ್ಯಕ್ತಿಗಳಿಗೆ ನೀಡಲಾದ ಮೀಸಲಾತಿ ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿನ ವಿವಿಧ ಕೋರ್ಸ್‌ಗಳಲ್ಲಿ ಪ್ರವೇಶಾತಿಯಲ್ಲಿ ನೀಡಲಾದ ಮೀಸಲಾತಿಗೆ ಪರಿಗಣಿಸಲು ಅರ್ಜಿದಾರರಿಗೆ ನೀಡಲಾಗುವ ಅರ್ಹತಾ ಪ್ರಮಾಣ ಪತ್ರದ ಬಗ್ಗೆ

ಸಾರ್ವಜನಿಕ ಉದ್ಯೋಗದಲ್ಲಿನ ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿನ ವಿವಿಧ ಕೋರ್ಸ್‌ಗಳಲ್ಲಿ ಪ್ರವೇಶಾತಿಯಲ್ಲಿ ನೀಡಲಾದ ಮೀಸಲಾತಿಯು ಸ್ಥಳೀಯ ವ್ಯಕ್ತಿಗಳಿಗೆ ಮಾತ್ರ ಸೀಮಿತವಾಗಿದ್ದು, ಸ್ಥಳೀಯ ವ್ಯಕ್ತಿಯೆಂದು ಅರ್ಹತೆ ಪಡೆಯಲು ಸಾರ್ವಜನಿಕ ಉದ್ಯೋಗ ಆದೇಶದ ಕಂಡಿಕೆ 6 ಹಾಗೂ ಶೈಕ್ಷಣಿಕ ಸಂಸ್ಥೆಗಳ ಆದೇಶದ ಕಂಡಿಕೆ 4ರಲ್ಲಿ ಸ್ಪಷ್ಟ ವಿವರಣೆ ಇರುವ ಹಿನ್ನಲೆಯಲ್ಲಿ, ಸದರಿ ಆದೇಶಗಳಲ್ಲಿನ ಅರ್ಥ ವಿವರಣೆಯನ್ನು ಮುಂದುವರೆಸುತ್ತಾ, ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ:

1. ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ರ ಕಂಡಿಕೆ 4(3) ಮತ್ತು 4(4)ರಂತೆ ಸ್ಥಳೀಯ ವೃಂದಕ್ಕೆ ಹಂಚಿಕೆ

......3

ಮಾಡುವ ಆದೇಶದಿಂದ ಬಾಧಿತನಾದ ಯಾವುದೇ ವ್ಯಕ್ತಿಯು, ಆದೇಶವು ತಲುಪಿದ ದಿನಾಂಕದಿಂದ 60 ದಿನಗಳ ಅವಧಿಯೊಳಗಾಗಿ ಮನವಿ ಸಲ್ಲಿಸಲು;

~~(ಅ) ನೇಮಕಾತಿ ಪ್ರಾಧಿಕಾರವು ಇಲಾಖಾ ಮುಖ್ಯಸ್ಥರ ಹಂತದಿಂದ ಕೆಳಗಿನ ಹಂತದಲ್ಲಿ ಇದ್ದ ಪಕ್ಷದಲ್ಲಿ ಇಲಾಖಾ ಮುಖ್ಯಸ್ಥರು~~

ಅಥವಾ

(ಬ) ಇಲಾಖಾ ಮುಖ್ಯಸ್ಥರು ನೇಮಕಾತಿ ಪ್ರಾಧಿಕಾರಿಗಳಾಗಿದ್ದ ಪ್ರಕರಣಗಳಲ್ಲಿ ಆಡಳಿತ ಇಲಾಖೆಯ ಕಾರ್ಯದರ್ಶಿಯವರು "ಮೇಲ್ಮನವಿ ಪ್ರಾಧಿಕಾರಿಗಳಾಗಿ" ಕಾರ್ಯನಿರ್ವಹಿಸಬೇಕೆಂದು ಸ್ಪಷ್ಟೀಕರಿಸಲಾಗಿದೆ.

2. ಆಂಗ್ಲ ಭಾಷೆಯಲ್ಲಿ ಹೊರಡಿಸಲಾದ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ರ ಕಂಡಿಕೆ 6(1)(ಎ)ನಂತೆ ಸ್ಥಳೀಯ ವ್ಯಕ್ತಿಯೆಂದು ಅರ್ಹತೆ ಪಡೆಯುವಲ್ಲಿ ಅವನು ಸ್ಥಳೀಯ ಪ್ರದೇಶದಲ್ಲಿ ಹುಟ್ಟಿದ್ದರೆ ಅಥವಾ ಅವನ ತಂದೆ-ತಾಯಿಯವರು 01.01.2013ಕ್ಕೆ ಮೊದಲು ಆ ಪ್ರದೇಶದಲ್ಲಿ ಹುಟ್ಟಿದ್ದರೆ ಎಂಬ ಅರ್ಥ ವಿವರಣೆಯನ್ನು ಸ್ಪಷ್ಟವಾಗಿ ನಮೂದಿಸಿದ್ದು, ಕನ್ನಡ ಭಾಷೆಯಲ್ಲಿ ಹೊರಡಿಸಲಾದ ಅದೇ ಆದೇಶದಲ್ಲಿ ದಿನಾಂಕ 01.01.2013ರ ಮುಂಚಿನ ಜನನ ಅಭ್ಯರ್ಥಿ ಹಾಗೂ ತಂದೆ-ತಾಯಿಗಳಿಬ್ಬರಿಗೂ ಅನ್ವಯಿಸುವ ಬಗ್ಗೆ ಗೊಂದಲವಿರುವ ಹಿನ್ನೆಲೆಯಲ್ಲಿ, ಆಂಗ್ಲ ಭಾಷೆಯಲ್ಲಿ ಹೊರಡಿಸಲಾದ ಆದೇಶದಲ್ಲಿ ನೀಡಲಾಗಿರುವ ಅರ್ಥ ವಿವರಣೆಯು ಸರಿ ಇರುವ ಹಿನ್ನೆಲೆಯಲ್ಲಿ, 01.01.2013ರ ದಿನಾಂಕ ಅಭ್ಯರ್ಥಿಯ ತಂದೆ-ತಾಯಿಗಳಿಗೆ ಮಾತ್ರ ಅನ್ವಯಿಸುವುದೆಂದು ಸ್ಪಷ್ಟೀಕರಿಸಲಾಗಿದೆ.

3. ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ರ ಕಂಡಿಕೆ 6(1)(ಎ)ನಂತೆ ಅಭ್ಯರ್ಥಿ ಅಥವಾ ಅವನ ತಂದೆ-ತಾಯಿ ಆ ಪ್ರದೇಶದಲ್ಲಿ ಹುಟ್ಟಿಲ್ಲದಿದ್ದಲ್ಲಿ, ಅಭ್ಯರ್ಥಿಯ ತಂದೆ ಅಥವಾ ತಾಯಿಗಳು ಸಾಮಾನ್ಯವಾಗಿ 01.01.2013ಕ್ಕೆ ಮೊದಲು 10 ವರ್ಷಗಳಿಗಿಂತ ಕಡಿಮೆ ಇರದ ಅವಧಿಯವರೆವಿಗೆ ಸ್ಥಳೀಯ ಪ್ರದೇಶದಲ್ಲಿ ವಾಸವಾಗಿರುವ ಬಗ್ಗೆ ನಿರೂಪಿಸುವ ದಾಖಲಾತಿಯೊಂದಿಗೆ ಅವರ ಹೆಸರು ಮತದಾರರ ಪಟ್ಟಿಯಲ್ಲಾಗಲಿ ಅಥವಾ ಪಡಿತರ ಚೀಟಿಯಲ್ಲಾಗಲಿ ಅಥವಾ ಸ್ಥಳೀಯ ಪ್ರದೇಶದಲ್ಲಿ 01.01.2013ರಂದು ಅಥವಾ ಮೊದಲು ಯಾವುದೇ ಸ್ಥಿರಾಸ್ತಿ ಹೊಂದಿದ್ದರೆ ಎಂಬ ನಮೂದು ಇರುವ ಹಿನ್ನೆಲೆಯಲ್ಲಿ, ಮತದಾರರ ಪಟ್ಟಿಯಲ್ಲಿನ ಅಥವಾ ಪಡಿತರ ಚೀಟಿಯಲ್ಲಿನ ಅವರ ಹೆಸರಿನ ನಮೂದು ಅಥವಾ ಸ್ಥಿರಾಸ್ತಿ ಹೊಂದಿರುವುದಕ್ಕೆ ಸಂಬಂಧಿಸಿದ ದಾಖಲಾತಿ ಇವುಗಳಲ್ಲಿ ಯಾವುದಾದರೂ ಒಂದು ದಾಖಲಾತಿಯನ್ನು, ಅವನ ತಂದೆತಾಯಿಗಳು ಸಾಮಾನ್ಯವಾಗಿ 01.01.2013ಕ್ಕೆ ಮೊದಲು 10 ವರ್ಷಗಳಿಗಿಂತ ಕಡಿಮೆ ಇರದ ಅವಧಿಗೆ ಸ್ಥಳೀಯ ಪ್ರದೇಶದಲ್ಲಿ ವಾಸವಾಗಿರುವುದರ ಜೊತೆಗೆ, ಹೊಂದಿರತಕ್ಕದ್ದು ಎಂದು ಸ್ಪಷ್ಟೀಕರಿಸಲಾಗಿದೆ.

4. ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು, 2013ರಂತೆ ನೀಡಲಾದ ಅರ್ಹತಾ ಪ್ರಮಾಣ ಪತ್ರಗಳು ಸಾರ್ವಜನಿಕ ಉದ್ಯೋಗದಲ್ಲಿ ಮೀಸಲಾತಿ ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿನ ವಿವಿಧ ಕೋರ್ಸ್‌ಗಳ ಪ್ರವೇಶಾತಿಯಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಉಪಯೋಗಿಸುತ್ತಿರುವುದರಿಂದ ಅರ್ಹತಾ ಪ್ರಮಾಣ ಪತ್ರದ ನಮೂನೆಯಲ್ಲಿ ಯಾವ ಉದ್ದೇಶಕ್ಕಾಗಿ ಅರ್ಹತಾ ಪ್ರಮಾಣ ಪತ್ರ ನೀಡಲಾಗಿದೆ ಎಂಬುದರ ಬಗ್ಗೆ ಅರ್ಹತಾ ಪ್ರಮಾಣ ಪತ್ರದ ನಮೂನೆಯ ಕೊನೆಯಲ್ಲಿ ಹಾಗೂ ಸಕ್ಷಮ ಪ್ರಾಧಿಕಾರದ ಸಹಿಯ ಮೊದಲು ಇರುವಂತೆ ಒಂದು ಟಿಪ್ಪಣಿ ದಾಖಲಿಸಬೇಕೆಂದು ಸಕ್ಷಮ ಪ್ರಾಧಿಕಾರಿಗಳಿಗೆ ತಿಳಿಸಲಾಗಿದೆ.

5. ಸಾರ್ವಜನಿಕ ಉದ್ಯೋಗದಲ್ಲಿನ ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿನ ವಿವಿಧ ಕೋರ್ಸ್‌ಗಳಲ್ಲಿ ಪ್ರವೇಶಾತಿಯಲ್ಲಿ ನೀಡಲಾದ ಮೀಸಲಾತಿಯು ಸ್ಥಳೀಯ ವ್ಯಕ್ತಿಗಳಿಗೆ ಮಾತ್ರ ಸೀಮಿತವಾಗಿದ್ದು, ಸ್ಥಳೀಯ ವ್ಯಕ್ತಿಯೆಂದು ಅರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾತ್ರ ಸದರಿ ಮೀಸಲಾತಿಗೆ ಅರ್ಹರೆಂದು, ಸ್ಥಳೀಯ ವ್ಯಕ್ತಿಯೆಂದು ನಿರ್ಣಯಿಸಲು ಅಭ್ಯರ್ಥಿಯ ಅಥವಾ ಆತನ ತಂದೆ/ತಾಯಿಯ ಜನನ ಇಲ್ಲವೇ ಅಧಿವಾಸದ ಹಿನ್ನೆಲೆಯಲ್ಲಿ, ಅಭ್ಯರ್ಥಿಯೂ ಸಹ ಸ್ಥಳೀಯ ವ್ಯಕ್ತಿಯೆಂದು ಪರಿಗಣಿಸಲು ಸಾರ್ವಜನಿಕ ಉದ್ಯೋಗ ಆದೇಶದ ಕಂಡಿಕೆ 6 ಹಾಗೂ ಶೈಕ್ಷಣಿಕ ಸಂಸ್ಥೆಗಳ ಆದೇಶದ ಕಂಡಿಕೆ 4ರಲ್ಲಿ ವಿವರವಾದ ಅರ್ಥ ವಿವರಣೆ ಇರುವ ಹಿನ್ನೆಲೆಯಲ್ಲಿ ಹಾಗೂ ಪ್ರತಿ ವಿವರಣೆಯಲ್ಲಿಯೂ 'ಅಥವಾ' ಎಂಬ ಪದ ಬಳಸಿರುವ ಹಿನ್ನೆಲೆಯಲ್ಲಿ ಪ್ರತಿಯೊಂದು ಅರ್ಥ ವಿವರಣೆಗಳಿದುರು ಅರ್ಹತೆ ಪಡೆದ ಎಲ್ಲಾ ಅರ್ಜಿದಾರರಿಗೆ ಅರ್ಹತಾ ಪ್ರಮಾಣ ಪತ್ರ ನೀಡುವಂತೆ ಸಕ್ಷಮ ಪ್ರಾಧಿಕಾರಿಗಳಿಗೆ ಸೂಚಿಸಲಾಗಿದೆ.

6. ಸಾರ್ವಜನಿಕ ಉದ್ಯೋಗ ಆದೇಶದ ಅಡಿಯಲ್ಲಿ ನೀಡಲಾಗುವ ಅರ್ಹತಾ ಪ್ರಮಾಣ ಪತ್ರವನ್ನು ಸಂದರ್ಶನ ಇಲ್ಲವೇ ನೇಮಕಾತಿ ಆದೇಶ ನೀಡುವ ಮುನ್ನ ಪಡೆಯುವಂತೆ ಸಂಬಂಧಿಸಿದ ಪ್ರಾಧಿಕಾರಗಳಿಗೆ ತಿಳಿಸಲಾಗಿದೆ. ಅಂತೆಯೇ, ಶಿಕ್ಷಣ ಸಂಸ್ಥೆಗಳಲ್ಲಿನ ವಿವಿಧ ಕೋರ್ಸ್‌ಗಳಲ್ಲಿನ ಪ್ರಾಧಿಕಾರಗಳಿಗೆ ತಿಳಿಸಲಾಗಿದೆ. ಮೀಸಲಾತಿಗೆ ಸಂಬಂಧಿಸಿದಂತೆ ನೀಡಲಾಗುವ ಅರ್ಹತಾ ಪ್ರಮಾಣ ಪತ್ರವನ್ನು, ಕೌನ್ಸಿಲಿಂಗ್ ಸಮಯದಲ್ಲಿ ಅಥವಾ ಪ್ರವೇಶಾತಿ ನೀಡುವ ಮುನ್ನ ಪಡೆಯುವಂತೆ ಸಂಬಂಧಿಸಿದ ಸಕ್ಷಮ ಪ್ರಾಧಿಕಾರ/ಶಿಕ್ಷಣ ಸಂಸ್ಥೆಗಳಿಗೆ ತಿಳಿಸಲಾಗಿದೆ.

7. ಅರ್ಜಿ ಸಲ್ಲಿಸುವ ಹಂತದಲ್ಲಿ ಅಭ್ಯರ್ಥಿಗಳಿಂದ ತಾವು ಸ್ಥಳೀಯ ವ್ಯಕ್ತಿ ಎಂದು ಕ್ಲೇಮ್ ಮಾಡುವಲ್ಲಿ ಒಂದು ಸ್ವಯಂ ಘೋಷಿತ ಪ್ರಮಾಣ ಪತ್ರವನ್ನು ಪಡೆದು, ಅದರ ಆಧಾರದ ಮೇಲೆ ಆಯ್ಕೆ ಪ್ರಕ್ರಿಯೆಯನ್ನು ಮುಂದುವರೆಸಲು ಸಹ ಸಂಬಂಧಿಸಿದವರಿಗೆ ಸೂಚಿಸಲಾಗಿದೆ. ಪರಂತು, ಅರ್ಜಿ ಸಲ್ಲಿಸುವ ದಿನಾಂಕದಂದು ಅರ್ಜಿದಾರರು ಸ್ಥಳೀಯ ವ್ಯಕ್ತಿಯೆಂದು ಅರ್ಹತೆ ಪಡೆಯುವುದು ಕಡ್ಡಾಯವಾಗಿರುತ್ತದೆ ಎಂದು ಸಹ ತಿಳಿಸಲಾಗಿದೆ.

8. ಶಿಕ್ಷಣ ಸಂಸ್ಥೆಗಳಲ್ಲಿನ ವಿವಿಧ ಕೋರ್ಸ್‌ಗಳಲ್ಲಿನ ಮೀಸಲಾತಿಗೆ ಸಂಬಂಧಿಸಿದಂತೆ ಸದರಿ ನಿಯಮದ ಕಂಡಿಕೆ 4(ಸಿ) ಅಡಿಯಲ್ಲಿ ನೀಡಲಾಗುವ ವ್ಯಾಸಂಗ ಪ್ರಮಾಣ ಪತ್ರಕ್ಕೆ ಈ ಕೆಳಕಂಡ ಸಕ್ಷಮ ಪ್ರಾಧಿಕಾರಿಗಳು ಯುಕ್ತವಾಗಿ ಪ್ರಮಾಣೀಕರಿಸುವ (counter signing authority) ಪ್ರಾಧಿಕಾರಿಗಳೆಂದು ಸ್ಪಷ್ಟೀಕರಿಸಲಾಗಿದೆ:

(i) ಒಂದನೇ ತರಗತಿಯಿಂದ 10ನೇ ತರಗತಿಯವರೆವಿಗೂ – ಕಾರ್ಯ ವ್ಯಾಪ್ತಿ ಹೊಂದಿರುವ ಬಿಇಓ.

(ii) 10ರಿಂದ 12ರವರೆವಿಗೂ – ಕಾರ್ಯ ವ್ಯಾಪ್ತಿ ಹೊಂದಿರುವ ಡಿಡಿಪಿಐ.

(iii) ಇತರೆ ವೃತ್ತಿಪರ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ, ಇಂತಹ ಕೋರ್ಸ್‌ಗಳ ಪಠ್ಯಕ್ರಮದ ಹಾಗೂ ಇತರೆ ವಿಷಯಗಳನ್ನು ನಿರ್ವಹಿಸುವ ಸಕ್ಷಮ ಪ್ರಾಧಿಕಾರ (regulator/competent body). ಉದಾ: ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಕುಲಸಚಿವರು; ತಾಂತ್ರಿಕ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಸಚಿವರು; ತಾಂತ್ರಿಕ ಡಿಪ್ಲೊಮೋ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು; ಪ್ಯಾರಾ ಮೆಡಿಕಲ್ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ, ಸದಸ್ಯ ಕಾರ್ಯದರ್ಶಿ, ಪ್ಯಾರಾ ಮೆಡಿಕಲ್ ಬೋರ್ಡ್: ಅಂತೆಯೇ, ಇತರೆ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಸಂಬಂಧಿಸಿದ ವಿಷಯಗಳನ್ನು ನಿರ್ವಹಿಸುವ ಸಕ್ಷಮ ಪ್ರಾಧಿಕಾರ.

ಮೇಲಿನ ಕಂಡಿಕೆಗಳಲ್ಲಿ ನೀಡಲಾದ ಸ್ಪಷ್ಟೀಕರಣಗಳಂತೆ ಸಂಬಂಧಿಸಿದವರು ಕ್ರಮ ವಹಿಸುವಂತೆ ಕೋರಲಾಗಿದೆ.

22.05.2015

(ಕೆ.ಎಲ್. ಲೋಕನಾಥ)

ಸರ್ಕಾರದ ಜಂಟಿ ಕಾರ್ಯದರ್ಶಿ

(ಹೈದ್ರಾಬಾದ್–ಕರ್ನಾಟಕ ವಿಶೇಷ ಕೋಶ)

ಸಿಆಸುಇ

<u>ಪ್ರತಿ:</u>

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
2. ಎಲ್ಲಾ ಇಲಾಖಾ ಮುಖ್ಯಸ್ಥರು.
3. ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ.
4. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
5. ಆಡಳಿತಾಧಿಕಾರಿಗಳು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
6. ಶಿಕ್ಷಣ ಇಲಾಖೆಯ ಹೆಚ್ಚುವರಿ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ.
7. ಜಿಲ್ಲಾಧಿಕಾರಿಗಳು, ಕಲಬುರಗಿ/ರಾಯಚೂರು/ಕೊಪ್ಪಳ/ಯಾದಗಿರಿ/ಬಳ್ಳಾರಿ/ಬೀದರ್ ಜಿಲ್ಲೆ.
8. ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು, ಕಲಬುರಗಿ/ರಾಯಚೂರು/ಕೊಪ್ಪಳ/ಯಾದಗಿರಿ/ಬಳ್ಳಾರಿ/ಬೀದರ್ ಜಿಲ್ಲೆ
9. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, ಕಲಬುರಗಿ/ರಾಯಚೂರು/ಕೊಪ್ಪಳ/ಯಾದಗಿರಿ/ಬಳ್ಳಾರಿ/ಬೀದರ್ ಜಿಲ್ಲೆ.
10. ಹೈದ್ರಾಬಾದ್–ಕರ್ನಾಟಕ ಪ್ರದೇಶದ ಎಲ್ಲಾ ಸಹಾಯಕ ಆಯುಕ್ತರು.
11. ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರುಗಳು.
12. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 78 ಹೈಕಕೋ 2014

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 16.11.2016

## ಸುತ್ತೋಲೆ

ವಿಷಯ: ವಿವಿಧ ನೇಮಕಾತಿ ಪ್ರಾಧಿಕಾರಿಗಳು ಅರ್ಜಿ ಸಲ್ಲಿಸುವ ಹಂತದಲ್ಲಿ ಪಡೆದ ಆಯ್ಕೆಯನ್ನು ಮುಂದುವರೆಸುತ್ತಾ, ಮೆರಿಟ್ ಪಟ್ಟಿ ತಯಾರಿಸಿದ ತರುವಾಯ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸುವ ಮುನ್ನ ಪಾಲಿಸಬೇಕಾದ ವಿಧಿ ವಿಧಾನಗಳ ಬಗ್ಗೆ.

******

ದಿನಾಂಕ 22.05.2015ರಂದು ಹೊರಡಿಸಲಾದ ಸುತ್ತೋಲೆಯಲ್ಲಿ ನೀಡಲಾದ ಮಾರ್ಗಸೂಚಿಗಳನ್ನು ಮುಂದುವರೆಸುತ್ತಾ, ಸ್ಥಳೀಯ ವೃಂದ ಹಾಗೂ ಮಿಕ್ಕುಳಿದ ವೃಂದಗಳಲ್ಲಿನ ಹುದ್ದೆಗಳನ್ನು ತುಂಬುವಲ್ಲಿ ಈ ಕೆಳಕಂಡಂತೆ ಕ್ರಮ ವಹಿಸಲು ಸೂಚಿಸಲಾಗಿದೆ:

1. ದಿನಾಂಕ 22.05.2015ರ ಸುತ್ತೋಲೆಯಲ್ಲಿ ನೀಡಲಾದ ಮಾರ್ಗಸೂಚಿಯು ಕರ್ನಾಟಕ ಲೋಕಸೇವಾ ಆಯೋಗದಿಂದ ಗೆಜೆಟೆಡ್ ಪ್ರೊಬೇಷನರ್ಸ್ ರೂಲ್ಸ್ ಅಡಿಯಲ್ಲಿ ಕೈಗೊಳ್ಳಬಹುದಾದ ನೇಮಕಾತಿಗೆ ಮಾತ್ರ ಸೀಮಿತವಾಗಿರುತ್ತದೆ.
2. ವಿವಿಧ ನೇಮಕಾತಿ ಪ್ರಾಧಿಕಾರಿಗಳು ಇನ್ನು ಮುಂದೆ ಮಿಕ್ಕುಳಿದ ವೃಂದ ಹಾಗೂ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಅರ್ಜಿ ಆಹ್ವಾನಿಸುವ ಅಧಿಸೂಚನೆಯನ್ನು ಪ್ರತ್ಯೇಕವಾಗಿ ಹೊರಡಿಸಿ, ಪ್ರತ್ಯೇಕವಾಗಿ ನೇಮಕಾತಿ ಪ್ರಕ್ರಿಯೆ ಕೈಗೊಂಡು ಆಯ್ಕೆ ಅಂತಿಮಗೊಳಿಸುವುದು.
3. ಈಗಾಗಲೇ ಒಂದೇ ಪದನಾಮದ ಸ್ಥಳೀಯ ವೃಂದ ಹಾಗೂ ಮಿಕ್ಕುಳಿದ ವೃಂದಗಳಲ್ಲಿ ಲಭ್ಯವಿರುವ ಹುದ್ದೆಗಳನ್ನು ತುಂಬುವ ನಿಟ್ಟಿನಲ್ಲಿ ಅರ್ಜಿಗಳನ್ನು ಆಹ್ವಾನಿಸುವ ಒಂದೇ ಅಧಿಸೂಚನೆಯಲ್ಲಿ ಸ್ಥಳೀಯ ವ್ಯಕ್ತಿಗಳಿಂದ ಒಂದೇ ಅರ್ಜಿ ಪಡೆದ ಪ್ರಕರಣಗಳಿಗೆ ಸಂಬಂಧಿಸಿದಂತೆ, ಅರ್ಜಿ ಸಲ್ಲಿಸಿದ ಸ್ಥಳೀಯ ವ್ಯಕ್ತಿಗಳಿಂದ, ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವ ಮುನ್ನ ಯಾವುದೇ ಹಂತದಲ್ಲಿ ಆಯ್ಕೆ ಪಡೆಯುವಂತಿಲ್ಲ.
4. ಮೆರಿಟ್ ಪಟ್ಟಿಯಿಂದ ಆಯ್ಕೆ ಪಟ್ಟಿಯನ್ನು ತಯಾರಿಸುವಲ್ಲಿ ಮೊದಲಿಗೆ ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳನ್ನು ಪರಿಗಣಿಸಿ, ಆಯ್ಕೆ ಪಟ್ಟಿ ತಯಾರಿಸುವುದು. ತದನಂತರ, ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆದುರಾಗಿ ಅರ್ಹ ಸ್ಥಳೀಯ ಅಭ್ಯರ್ಥಿಗಳ ಆಯ್ಕೆ ಪಟ್ಟಿ ತಯಾರಿಸುವುದು.

16.11.2016
(ಕೆ.ಎಲ್. ಲೋಕನಾಥ)
ಸರ್ಕಾರದ ಜಂಟಿ ಕಾರ್ಯದರ್ಶಿ
(ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶ)
ಸಿಆಸುಇ

ಪ್ರತಿ:

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
2. ಎಲ್ಲಾ ಇಲಾಖಾ ಮುಖ್ಯಸ್ಥರು.
3. ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ.
4. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
5. ಆಡಳಿತಾಧಿಕಾರಿಗಳು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಪೋಲೀಸ್ ಹೌಸಿಂಗ್ ಕಾರ್ಪೊರೇಷನ್.
7. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ.
8. ಕುಲಸಚಿವರು, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ.
9. ಶಿಕ್ಷಣ ಇಲಾಖೆಯ ಹೆಚ್ಚುವರಿ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ.
10. ಜಿಲ್ಲಾಧಿಕಾರಿಗಳು, ಕಲಬುರಗಿ/ರಾಯಚೂರು/ಕೊಪ್ಪಳ/ಯಾದಗಿರಿ/ಬಳ್ಳಾರಿ/ಬೀದರ್ ಜಿಲ್ಲೆ.
11. ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು, ಕಲಬುರಗಿ/ರಾಯಚೂರು/ಕೊಪ್ಪಳ/ಯಾದಗಿರಿ/ಬಳ್ಳಾರಿ/ಬೀದರ್ ಜಿಲ್ಲೆ.
12. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, ಕಲಬುರಗಿ/ರಾಯಚೂರು/ಕೊಪ್ಪಳ/ಯಾದಗಿರಿ/ಬಳ್ಳಾರಿ/ ಬೀದರ್ ಜಿಲ್ಲೆ.
13. ಹೈದ್ರಾಬಾದ್-ಕರ್ನಾಟಕ ಪ್ರದೇಶದ ಎಲ್ಲಾ ಸಹಾಯಕ ಆಯುಕ್ತರು.
14. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.

**GOVERNMENT OF KARNATAKA**

No. DPAR 43 HKC 2013 (P-1) Karnataka Government Secretariat,
Vidhana Soudha,
Bangalore. dated: 17.06.2014

***CIRCULAR***

Sub: Operational guidelines for organization of local cadre for Hyderabad-Karnataka region and allotment of persons in implementation of Article 371(J) of the Constitution of India – regarding.

*********

Consequent upon the amendment to the Constitution of India by insertion of Article 371(J), the Parliament has authorized H.E. the President of India, to entrust special responsibility to H.E. the Governor of Karnataka to initiate all that action required for area development, reservation of seats in educational institutions and reservation of posts in Public Employment to the local persons of Hyderabad-Karnataka Region. In pursuance to this, H.E. the Governor of Karnataka, has approved consequential notifications; one of which is the Karnataka Public Employment (Reservation in Appointment for Hyderabad-Karnataka Region) Order, 2013. This order provides for Regional and State level reservations in civil services or civil posts under the State Government in local authority or body or organization under the control of the State Government in that region as well as the State level offices or Institutions or Apex Institutions by forming separate local cadres in respect of the reserved posts, within 3 months from the date of the order. As such, the appointing authorities can undertake the process of filling up of the posts, only after the local cadre is organized and a notification to this effect is issued.

The rules pertaining to the issual of certificates and organization of local cadres, allotment and transfer of persons have since been issued. Such of the reserved posts in the local cadre so formed shall be filled by local persons and would apply to all category of posts in all direct recruitments and upto Group 'A' Junior scale in respect of all promotions. Para 3(1) of the Karnataka Public Employment (Reservation in Appointment for Hyderabad-Karnataka Region) Order, 2013 which is gazetted on 06.11.2013 mandates the formation of local cadres. It is felt that broader guidelines are issued for guidance and compliance of the Appointing Authorities, in identification of posts, both at the offices located in the Hyderabad-Karnataka region as also at the State level offices/institutions, to enable them to form local cadres as per the orders and rules issued in this regard.

| Director | JD | AD | Manager. | CW |
| --- | --- | --- | --- | --- |
| | | | | |

......2

The following is the sequence of steps involved in the process of forming separate local cadres for Hyderabad-Karnataka Region:

1. The Secretaries/Principal Secretaries of the Administrative Departments are required to list out the various field Departments/Heads of the Departments, PSU's, ULB's, PRI's, Statutory Boards & corporations, Institutions, Body corporates, Universities and others Institutions assisted, controlled and financed by the State Government.
2. The spread of the offices and establishments of each of the above organizations/institutions located in different parts of the State are to be listed out.
3. The details of various categories of posts in each of the offices in respect of the above organizations/institutions indicating the time scale of pay and nomenclature of the posts along with the cadre strength in respect of each category of posts classifying them into group A senior and Junior scales, Group B, C and D categories in respect of all the posts carried in each of the offices of each of the organizations/institutions/establishments located in different parts of the State needs to be identified.
4. Each of the offices/establishments located in different parts of the State, including the State Capital region, are to be classified either as offices located in the Hyderabad-Karnataka region or State level offices or offices located outside the Hyderabad-Karnataka Region, but not falling under the definition of the State level offices or institution or apex institutions. In doing so, the definition as at Para 2(i) and 13 of the order read with the amendments issued in this regard may be referred to, while classifying any office either as a State level office or an office located either in the Hyderabad-Karnataka Region or outside Hyderabad-Karnataka Region.

## REGIONAL RESERVATION

5. After having classified the offices located in different parts of the State into State level or Regional level offices or other offices, the posts in respect of each of the offices located in the Hyderabad-Karnataka Region are to be identified along with their cadre strength in the offices of Hyderabad-Karnataka region vis-à-vis the overal cadre strength along with the working strength as per the cadre and recruitment rules of the concerned organizations indicating in detail, the time scale of pay, nomenclature of each of the posts besides classifying the posts as group A Senior or Junior Scale, Group B, C and D posts.
6. Such of the posts falling under Group A, B, C, D in respect of all the offices of a particular organization located in the Hyderabad-Karnataka Region shall be identified to arrive at the admissible

regional reservation. While in respect of Group C & D posts, the posts at the district level are considered to arrive at the admissible reservation to enable to organize local cadre at the district level besides ensuring recruitment of group C & D posts to be dealt as District wise cadre.

7. In respect of organizations/establishments/universities/institutions located in the region are concerned which qualify the definition of State level institutions, various categories of posts in the head office/corporate office/registered office/administrative office/campus where the office of the head of the institution is located are considered for the purpose of providing State level reservation of 8%. In respect of the units/establishments/offices of such organizations/establishments/universities/institutions falling within the region of Hyderabad-Karnataka, various categories of posts in these units/establishments/offices are considered for the purpose of providing reservations to the local persons at the rate of 75% in respect of Group A and B posts while 80% and 85% in respect of Group C and D posts.

8. The local cadre formed by Grouping the reserved posts, in the State level institutions and also in respect of the reservations provided at the district/sub-district/regional offices, can be merged together, if need be, forming a State wide local cadre, taking into consideration the administrative convenience in managing the cadres. However, the appointing authorities shall, as far as possible, try to form local cadres at the district levels in respect of Group C and D posts.

9. For the purpose of formation of local cadre, Hyderabad-Karnataka Region shall comprise of revenue districts of Bidar, Gulbarga, Raichur, Koppal, Yadgir, and Bellary districts. The posts in respect of each of the Group A, B cadres in each of the offices of the Hyderabad-Karnataka Region in respect of each of the organizations shall be identified to arrive at the regional reservation. The cadre strength as indicated in the cadre and recruitment rules (besides the posts created by the organization with the approval of the competent authority with concurrence of the Finance Department, from time to time, by issual of executive orders) shall be the basis to arrive at the admissible reservation.

10. Having identified the posts in all the offices in Hyderabad-Karnataka Region coming under various Government Departments, PSU's, PRI's, ULB's, Universities, Boards and corporations, Institutions and Body corporates, action is to be initiated in the direction of organizing a separate local cadre by the concerned appointing authorities in arriving at the admissible reservation in respect of various category of posts in the offices located in the Hyderabad-Karnataka region as hereunder:

......4

| | |
|---|---|
| Group A | – 75% of the posts in the offices/ establishments in case of all direct recruitment posts, while in promotions, the reservation is up to Group 'A' Junior scale posts. |
| Group B posts | – 75% of the posts in the offices/establishments. |
| Group C posts | – 80% of the posts in the offices/establishments. |
| Group D posts | – 85% of the posts in the offices/establishments. |

11. After providing for the reservation as above, in respect of the posts in the offices/establishments located in the Hyderabad-Karnataka region, the balance posts in the region shall be filled as if it has not been reserved. Such of the reserved posts are grouped together to form a local cadre and the balance posts shall form the residual parent cadre. The two cadres so arrived at shall be dealt as separate units for the purpose of direct recruitment, promotions, seniority and operation of the roaster points. The instructions issued by DPAR in regard to operation of the roaster points from time to time shall be followed mutatis and mutandis.
12. The region for which a local cadre has been organized in respect of any category of posts, shall be a separate unit for the purpose of recruitment, appointment, seniority, promotion, transfer and operation of roaster points.
13. The Appointing Authorities shall ensure that separate seniority at the District and sub-district and regional level as the case may be, is maintained at the region in respect of various category of posts besides maintaining the inter-se-seniority between districts, sub-district and region level in the region in addition to the inter-se-seniority between the region and the state level wherever is required in respect of various category of posts. In addition, while filling up of the posts both by way of direct recruitment and by way of promotion, after allotment of persons, the appointing authorities shall initiate immediate action to balance the roaster points while filling up of vacancies.. The instruction contained in the O.M. No. DPAR 33 HKP 2014, dated 10.04.2014 shall be strictly followed while balancing and operation of roster points.
14. After having fixed the reservation as above, in respect of various category of posts, the details of incumbency in respect of working employees is to be obtained in so far as the posts in the offices located in the Hyderabad-Karnataka Region concerned. The incumbents qualifying the definition of local persons working against various posts in various offices/establishments located in Hyderabad-Karnataka region shall be given an option to exercise their option either opting to the local cadre or the residual parent cadre as detailed in rules pertaining to the organization of the local cadres issued in this regard. The appointing authorities may also take a view to allow the local persons to exercise option to various categories of local cadres comprising of sub-district, level local cadre, district level local cadre,

.......5

regional level local cadre, State level local cadre and State wide local cadre, depending on the availability of each of the above categories of local cadres. Such of those working against these posts qualifying the definition of local person including other local persons working elsewhere in the State, qualifying the definition of a local persons, would be given an opportunity to exercise their options either to opt for the local cadre or for the residual cadre. Such of the local persons working against the posts in the Hyderabad-Karnataka Region who would opt to the local cadre itself, shall be given a lien against the posts in the local cadre. The appointing authorities may take a call whether or not to entertain the option opting to the local cadre in respect of such of the candidates qualifying local persons criteria working else in the State to give a lien either in the sub-district or district or regional level local or State level local cadres to suit the administrative convenience depending upon the vacancies available in different local cadres. The incumbents shall be allotted to the respective cadres fixing their lien in the respective cadres in the background of the available vacancies in the respect of each of the cadres. In the event of shortfall, the same shall be carried forward as backlog vacancies and made good in subsequent filling up process and in doing so available vacancies shall be carried forward as backlog vacancies till the next recruitment. In the event of excess found, action would be taken to treat the incumbents as on deputation to other cadre/cadres.

15. Thus, the incumbents working against each category of posts in the Offices/establishment located in Hyderabad-Karnataka region shall be allotted to the respective local and residual cadres. In doing so, the appointing authorities shall obtain the option from the incumbents and such of the incumbents opting for the local cadre, who would hail from the same district/sub-district would be given preference to fix their lien in the district/sub-district local cadre. However, in the event of non-availability of vacancy, in such a local cadre, the appointing authority may consider the option given by the incumbent to fix his lien in respect of other local cadres, depending upon the availability of vacancy in other local cadres, in the background of administrative convenience. In processing the option, the appointing authorities shall consider the birth place/domicile/home town of the incumbent as the basis to consider the order of preference of the option exercised by the incumbents while allotting the lien to the respecting local cadres. Hence, the appointing authorities depending upon the number of local cadres available under their administrative control, can obtain a option from the incumbents indicating the order of preference, of their option to different local cadres.

......6

## STATE LEVEL RESERVATION

16. The Secretaries/Administrative Secretaries and the Appointing Authorities may take a view whether or not to provide reservation in respect of the posts available in the offices located outside the region; but not qualifying the definition of the State level offices/Institution taking into consideration their location, service area, jurisdiction and also the staffing pattern vis-à-vis the staffing pattern of similar offices located in the Hyderabad-Karnataka region. The broader definition of the State level institutions as at Para 2(1)(b)(i) and 13(i) of the employment order and the amendments issued thereon from time to time shall be followed.
17. After having identified various offices located in different parts of the State by HOD's, CEO's of PSU's, Boards and Corporations, PRI's, ULB's, Institutions and Body corporates, such of the offices qualifying the definition of State level offices or Institutions as defined in Para 2(1)(b)(i) and 13 of the order, shall be segregated to work out the State level reservations. Such of the posts available in the Head offices/corporate/registered offices of the establishments serving the entire State or the jurisdiction of which extends to the State as a whole or serving the State capital region or serving whole State, would broadly qualify for being classified as State level offices or Institutions. The various category posts in the Head office/registered/corporate offices of the State level organizations shall be identified, category wise into group A Junior and Senior Scales, group B, group C and group D to earmark State level reservation. There will not be any reservation in respect of Group A Senior scale posts in the case of promotions; while there would be 8% reservation in respect of all category of posts in Group A, B, C & D cadres in respect of all category of posts in case of direct recruitments while in the case of promotions the reservation shall be in respect of all category of posts up to Group 'A' junior scale.

## APPLICABILITY OF RESERVATION

18. There will not be any reservation either at the regional level or at the State level in respect of group A Senior scale posts proposed to be filled by way of promotion.
19. In the case of promotions, the ratio proportion in respect of feeding cadres, as indicated in the cadre and recruitment rules, shall be followed.
20. Such of the reserved posts shall be grouped, formed into separate local cadre and the residual parent cadres, shall constitute separate units for the purpose of recruitment, appointment, seniority, promotion and operation of roaster points.
21. There shall not be reservation in case where single post exist.

## SENIORITY AND RELATED ISSUES

22. After having segregated the posts in the Hyderabad-Karnataka region and the State level institutions and having formed separate local cadres, the appointing authorities shall ensure the following:

a) The seniority at the district local cadre in the districts of Hyderabad-Karnataka region is maintained after allotting the incumbents to the respective cadres by fixing their lien in the respective cadres in light of the option exercised by them in respect of Group C & D posts; while the appointing authorities may take a view to maintain region wise seniority in respect of group A & B posts depending up to the administrative convenience in cadre management.

b) After identifying the local persons from among the working strength, such of the incumbents qualifying the definition of local persons would be given an opportunity to exercise their option opting to the local cadre or otherwise based on the seniority. Such of those opting the local cadre shall be given lien in the local cadre. Such of those opting the local cadres will move from the parent cadre to the respective local cadre along with their seniority and roaster points. After the allotment of the incumbents is complete, a clear picture would emerge about the vacancy position in the local and the residual parent cadres. The allocation to the respective cadres, so made would result in each of the incumbents in moving to their respective cadre along with their seniority and roaster points. This would result in imbalance in the roaster in both the cadres and the appointing authorities shall take immediate steps to map the representation of roaster points in each of the cadres separately, map the same with the standard roaster points and ensure that the imbalance in the roaster is balanced at the time of filling up of the posts in each of the cadres so as to balance the roaster points in the immediate attempt to fill up the vacancies. The instructions contained in O.M. No. DPAR33 HKP 2014, dated 10.04.2014 shall be scrupulously followed in balancing the roster points and the operation of the roster thereon.

c) The inter-se seniority among the incumbents of group C & D in different districts in the Hyderabad-Karnataka Region shall be maintained between the local and the residual cadres.

d) The combined inter-se seniority in respect of all category of posts among all the incumbents of the concerned Departments/ establishments falling under group C & D covering the sub-district, district, regional and State level local cadres in respect of all cadres borne in the cadre and recruitment rules, shall thereon be maintained and reviewed from time to time.

23. In forming local cadres, in so far as, Group C and D posts are concerned, the appointing authorities shall, as far as possible, ensure that District wise cadres are made and suitably incorporated in the cadre and recruitment rules wherever required so as to enable the cadre and recruitment for Group C and D posts be organized as district wide cadre itself.

24. The guidelines contained in the above paragraphs are only illustrative, but not exhaustive and all the provisions, clarifications and guidelines contained in the rules issued in this regard are to be strictly complied to. In the event of any doubt or clarification, the appointing authorities shall seek the need based clarifications from the Secretaries/Principal Secretaries of the Administrative Departments and the Secretaries/Principal Secretaries of the Administrative Departments shall, if need be, seek the need based clarifications from DPAR.

13.06.2014
**(K.L. LOKANATHA)**
Joint Secretary to Government,
(Hyderabad-Karnataka Special cell),
Department of Personnel &
Administrative Reforms.

***Copy to:***

1. Secretary to Governor, Rajbhavan, Bangalore.
2. Personal Secretary to the Chief Secretary to the Government.
3. Personal Secretary to All the Additional Chief Secretaries to the Government.
4. Principal Secretary to the Hon'ble Chief Minister.
5. PS to Hon'ble Minister of Rural Development and Panchayat Raj Department and Chairman of the Cabinet Sub-Committee.
6. All the Principal Secretaries/Secretaries to Government.
7. All Heads of Departments/Deputy Commissioners/Chief Executive Officers.
8. The Secretary, Karnataka Legislative Council/Assembly, Vidhana Soudha, Bangalore.
9. The Secretary, KPSC, Bangalore.
10. The Registrar, High Court of Karnataka, Bangalore.
11. The Registrar, Karnataka Administrative Tribunal, Bangalore.
12. The Registrar, Karnataka Lokayukta, Bangalore.
13. Website/Weekly Gazette/Spare Copies /Section Guard File.